**ಮಾನ್ಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ**
**ನಿಪ್ಪಾಣಿ**

**ಸಿ.ಸಿ. ನಂಃ 222/2013**

| ಸಿ.ಡಬ್ಲ್ಯೂ ಃ | ಪಿ.ಡಬ್ಲ್ಯೂ ಃ |
|---|---|
| 14 | 9 |

| | |
|---|---|
| **ಹೆಸರು** | ಶ್ರೀ ಅರ್ಜುನ ಚನ್ನಪ್ಪಾ ಹಂಚಿನಮನಿ |
| **ವಯಸ್ಸು** | 67 ವರ್ಷ |
| **ಉದ್ಯೋಗ** | ನಿವೃತ್ತ ಪಿ ಎಸ್ ಐ, ಕಾಕತಿ ಪೋಲಿಸ್ ಠಾಣೆ ಬೆಳಗಾವಿ |
| **ವಾಸ ಸ್ಥಳ** | ಬೆಳಗಾವಿ |

**ಸಾಕ್ಷಿಯನ್ನು ದಿನಾಂಕ 05-06-2026 ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**
**ಮುಖ್ಯ ವಿಚಾರಣೆಃ ಎ ಪಿ ಪಿ ಅವರಿಂದಾಃ**

ನಾನು ದಿನಾಂಕ 06-03-2011 ರಿಂದ 22-03-2013 ರವರೆಗೆ ನಾನು ನಿಪ್ಪಾಣಿ ಬಸವೇಶ್ವರ ಚೌಕ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 25-10-2012 ರಂದು ನಾನು ಪೆಟ್ರೋಲಿಂಗ್/ಗಸ್ತು ಕರ್ತವ್ಯದಲ್ಲಿದ್ದಾಗ, ಮಧ್ಯಾಹ್ನ 2.20 ಗಂಟೆಗೆ ನಮ್ಮ ಠಾಣೆಯಿಂದ ನನಗೆ ಒಂದು ಕರೆ ಬಂದಿದ್ದು, ಎನ್ ಎಚ್-4 ರಸ್ತೆಯ ಪಕ್ಕ ಯರೂರಕರ ಪೆಟ್ರೋಲ್ ಪಂಪ್ ಹತ್ತಿರ ಒಂದು ಅಪಘಾತ ಆಗಿದ್ದರ ಬಗ್ಗೆ ಮಾಹಿತಿ ಇದ್ದು, ನನಗೆ ಸದರಿ ಸ್ಥಳಕ್ಕೆ ಭೇಟಿ ನೀಡಲು ಹೇಳಿದರು. ನಂತರ ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿ 2 ಮೋಟರ್ ಸೈಕಲ್ ನಡುವೆ ಅಪಘಾತವಾಗಿತ್ತು. ನಾನು ಸದರಿ ಸ್ಥಳಕ್ಕೆ ಹೋದಾಗ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ನಿಪ್ಪಾಣಿಯ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದಾಗ ಒಬ್ಬ ವ್ಯಕ್ತಿ ಅಪಘಾತದಲ್ಲಿ ಮರಣ ಹೊಂದಿದ್ದು, ಇನ್ನೊಬ್ಬ ವ್ಯಕ್ತಿ ಚಿಕಿತ್ಸೆ ಪಡೆಯುತ್ತಿದ್ದನು. ಮೃತನ ಮಗ ಶ್ರೇಯಸ್ ಸಂಜಯ ಪಾಟೀಲ ಈತನು ಆಸ್ಪತ್ರೆಯಲ್ಲಿದ್ದು, ಆತನಿಂದ ಒಂದು ಪಿರ್ಯಾದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ನಾನು ಸದರಿ ಪಿರ್ಯಾದನ್ನು ತೆಗೆದುಕೊಂಡು ಬಂದು ಅದರ ಆಧಾರದ ಮೇರೆಗೆ ಒಂದು ಪ್ರಥಮ ವರ್ತಮಾನ ವರದಿಯನ್ನು ನಮ್ಮ ಮೇಲಾಧಿಕಾರಿಯವರಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ಈ ಪ್ರಕರಣದ ಕಡತವನ್ನು ಪ್ರಕರಣವು ಘೋರ ಪ್ರಕರಣವಾದ ಕಾರಣ ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ. ದೂರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎಸ್ ವಿ ವಕೀಲರಿಂದಾ:**

ನನಗೆ ಸದರಿ ದಿನ ಗಸ್ತು ಕರ್ತವ್ಯ ಬೆಳಿಗ್ಗೆಯಿಂದ ನಿಗದಿಯಾಗಿತ್ತು. ಸದರಿ ನಾನು ಅಕ್ಕೋಳ ರಸ್ತೆಯಲ್ಲಿ ಇದ್ದಾಗ ಮಧ್ಯಾಹ್ನ 2.20 ರ ಸಮಯದಲ್ಲಿ ನನಗೆ ಠಾಣೆಯಿಂದ ಮಾಹಿತಿ ಬಂದಿತ್ತು. ನನಗೆ ಮಾಹಿತಿ ನೀಡಿದ ಠಾಣಾ ಸಿಬ್ಬಂದಿಯ ಹೆಸರು ಹೇಳಲು ಆಗುವುದಿಲ್ಲ. ನನಗೆ ಸದರಿ ದಿನ ಯಾವುದೇ ಮಾಹಿತಿ ನಮ್ಮ ಠಾಣೆಯ ಸಿಬ್ಬಂದಿಯಿಂದ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಮಾಹಿತಿ ಬಂದಾಗ ನಿಪ್ಪಾಣಿಯ ಹಳೆಯ ಕೋರ್ಟ್ ಬಳಿ ಇದ್ದೇನು. ಘಟನಾ ಸ್ಥಳವು ಸದರಿ ದಿನ ನನಗೆ ಮಾಹಿತಿ ಬಂದ ಸ್ಥಳದಿಂದ ಸುಮಾರು 2 ಕಿ ಮೀ ಅಂತರದಲ್ಲಿತ್ತು. ನಾನು ಘಟನಾ ಸ್ಥಳವನ್ನು 5 ನಿಮಿಷದೊಳಗಾಗಿ ತಲುಪಿರುತ್ತೇನೆ. ಘಟನಾ ಸ್ಥಳದ ಬಳಿ ಎನ್ ಎಚ್ ಹೆದ್ದಾರಿ ದಕ್ಷಿಣೋತ್ತರ ಸಾಗುವ ಸರ್ವಿಸ್ ರಸ್ತೆ ಇರುತ್ತದೆ ಎಂದರೆ ಸರಿ. ಅದೇ ರೀತಿ ಘಟನಾ ಸ್ಥಳದ ಬಳಿ ಪೂರ್ವ ಪಶ್ಚಿಮವಾಗಿ ಸಾಗುವ ಒಂದು ರಸ್ತೆ ಇರುತ್ತದೆ ಎಂದರೆ ಸರಿ. ಯರೂರಕರ ಪೆಟ್ರೋಲ್ ಪಂಪ್ ಸರ್ವಿಸ್ ರಸ್ತೆಯಿಂದ 20 ಅಡಿ ಅಂತರದಲ್ಲಿ ಪಶ್ಚಿಮದ ಕಡೆ ಇರುತ್ತದೆ. ಅಪಘಾತವು ಸರ್ವಿಸ್ ರಸ್ತೆಯ ಮೇಲೆ ಆಗಿತ್ತು.

2. ನಾನು ಘಟನಾ ಸ್ಥಳದಿಂದ ಆಸ್ಪತ್ರೆ ತಲುಪಿದಾಗ ಸಮಯ ಮಧಾಹ್ನ 2.30 ಆಗಿತ್ತು. ನಾನು ಈ ಪ್ರಕರಣದಲ್ಲಿ ಮೇಲಾಧಿಕಾರಿಗಳಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಿಪಿ-2 ನ್ನು ಚಾಸಾ-1 ರವರೇ ಬರೆದುಕೊಟ್ಟಿರುತ್ತಾರೆ. ನಾನು ಆಸ್ಪತ್ರೆಗೆ ಹೋದಾಗ ಮೃತನ ಸಂಬಂಧಿಕರು ಚಾಸಾ-1 ರವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ದಿನಾಂಕ 25-10-2012 ರಂದು ನನಗೆ ನಮ್ಮ ಠಾಣೆಯಿಂದ ಯಾವುದೇ ಮಾಹಿತಿ ಬಂದಿರಲಿಲ್ಲ ಮತ್ತು ನಾನು ಯಾವುದೇ ಘಟನಾ ಸ್ಥಳಕ್ಕೆ ಭೇಟಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಂದ ಯಾವುದೇ ಲಿಖಿತ ದೂರನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಿಪಿ-2 ನ್ನು ಸೃಷ್ಟಿಸಿ, ಮೃತನ ಕುಟುಂಬಕ್ಕೆ ಸಹಾಯವಾಗಲಿ ಎಂದು ಒಂದು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಿಕೃತ ಮಾಡಲಾಯಿತು).

**ಓ.ಹೇ.ಕೆ.ಸ.ಇ.**

**Sd/-**
**ಪ್ರ.ದರ್ಜೆ ನಾ.ದಂಡಾಧಿಕಾರಿಗಳು,**
**ನಿಪ್ಪಾಣಿ**